ದಿಃ 28.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ಪಾಟೀ ಸವಾಲುಃ ಶ್ರೀ ಎಸ್.ಡಿ. ವಕೀಲರಿಂದ ವಾದಿ ಪರವಾಗಿ

1. ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ದಾವಾ ಸ್ವತ್ತುಗಳನ್ನು ನಾನು ಮತ್ತು ಇತರೆ ಪ್ರತಿವಾದಿಗಳು ನೊಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ಎರಡು ದಾನ ಪತ್ರಗಳನ್ನು ಮಾಡಿಕೊಳ್ಳುವಾಗ ನಾವು ವಾದಿಯನ್ನು ಕೇಳಿದ್ದೆವು. ವಾದಿ ಆ ಸಮಯದಲ್ಲಿ ಬರುತ್ತೇನೆ ಮಾತುಕತೆ ಆಡೋಣ ಎಂದು ತಿಳಿಸಿದ್ದರು. ದಿನಾಂಕ 25.08.2012 ರಲ್ಲಿ ಐದನೇ ಪ್ರತಿವಾದಿ ಹೆಸರಿಗೆ ಆದ ದಾನಪತ್ರವನ್ನು ನಾವು ವಾದಿಗೆ ತಿಳಿಸದೇ ಮಾಡಿಕೊಂಡಿದ್ದೇವೆ ಎಂದರೆ ಸರಿ. ಐದನೇ ಪ್ರತಿವಾದಿಯ ಹೆಸರಿಗೆ ಆದ ದಾನಪತ್ರದಲ್ಲಿ ಕಾಣಿಸಿರುವ ಸ್ವತ್ತಿನ ಮೇಲೆ ವಾದಿಗೂ ಸಹ ಹಕ್ಕು ಇದೆ ಎಂದರೆ ಸರಿ.
2. ಐದನೇ ಪ್ರತಿವಾದಿ ನನ್ನ ಸಹೋದರ. ದಿನಾಂಕ 16.11.2021 ರಂದು ಒಂದನೇ ಪ್ರತಿವಾದಿಯಿಂದ ನನ್ನ ಮತ್ತು ಮೂರನೇ ಪ್ರತಿವಾದಿಯ ಹೆಸರಿಗೆ ಮಾಡಿಕೊಂಡ ಸ್ವತ್ತುಗಳ ಮೇಲೆ ಸಹ ವಾದಿಗೆ ಹಕ್ಕು ಇದೆ ಎಂದರೆ ಸರಿ. ದಿನಾಂಕ 25.08.2012 ಮತ್ತು ದಿನಾಂಕ 16.11.2021 ರಂದು ದಾನಪತ್ರಗಳು ಆದ ಬಳಿಕ ಆ ಸ್ವತ್ತುಗಳ ಮೇಲೆ ಇರುವ ಹಕ್ಕನ್ನು ನಮಗೆ ಬಿಟ್ಟುಕೊಡಿ ಎಂದು ನಾವು ಕೇಳಿಲ್ಲ. ವಾದಿ ಆಸ್ತಿಗಳಲ್ಲಿ ಪಾಲು ಬೇಕು ಎಂದು ಕೇಳಿರುವ ಪರಿಹಾರ ಸರಿಯಾಗಿದೆ ಎಂದರೆ ಸರಿ. ವಾದಿಗೆ ಆಸ್ತಿಗಳಲ್ಲಿ ಪಾಲು ನೀಡಬೇಕು ಎಂಬ ಕಾರಣಕ್ಕೆ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

Sd/-XX
ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ
ಮಾ